250

# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 983 (1241)

2) ಸದಸ್ಯರ ಹೆಸರು : ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

3) ಉತ್ತರಿಸುವ ದಿನಾಂಕ : 21.08.2025

4) ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಇತ್ತೀಚಿನ ದಿನಗಳಲ್ಲಿ ಜಿ.ಎಸ್.ಟಿ. ಸಂಬಂಧಿತವಾಗಿ ರಾಜ್ಯದಲ್ಲಿ ಸಣ್ಣ ವ್ಯಾಪಾರಿಗಳು ಹಾಗೂ ಸಣ್ಣ ವ್ಯಾಪಾರ ವಹಿವಾಟು ನಡೆಸುವವರಿಗೆ ಎದುರಾಗುತ್ತಿರುವ ಪ್ರಮುಖ ಸಮಸ್ಯೆಗಳು ಯಾವುವು; | ಜಿ.ಎಸ್.ಟಿ. ಕಾಯ್ದೆಯು 2017 ರಿಂದ ದೇಶದಾದ್ಯಂತ ಎಲ್ಲಾ ರಾಜ್ಯಗಳಲ್ಲಿ ಸಮಾನಾಂತರವಾಗಿ ಜಾರಿಯಾಗಿದ್ದು, ಪ್ರಮುಖ ಸಮಸ್ಯೆಗಳು ಕಂಡುಬಂದಿರುವುದಿಲ್ಲ. |
| ಆ) | ಸರ್ಕಾರದ ಗಮನಕ್ಕೆ ಸಮಸ್ಯೆಗಳು ಬಂದಿದೆಯೇ; (ಬಂದಿದ್ದರೆ ಅವುಗಳನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು) | ಪ್ರಮುಖ ಸಮಸ್ಯೆಗಳು ಕಂಡುಬಂದಿರುವುದಿಲ್ಲ. |
| ಇ) | ಸಣ್ಣ ವ್ಯಾಪಾರಿಗಳಿಗೆ ಜಿ.ಎಸ್.ಟಿ ಸಂಬಂಧಿತ ತಾಂತ್ರಿಕ ಸಹಾಯ ಪರಿಷ್ಕಾರ ಹಾಗೂ ತರಬೇತಿ ನೀಡುವ ಯಾವುದೇ ಕಾರ್ಯಕ್ರಮಗಳನ್ನು ಸರ್ಕಾರ ಹಮ್ಮಿಕೊಂಡಿದೆಯೇ, ಇದ್ದಲ್ಲಿ ಸಂಪೂರ್ಣ ವಿವರ ಒದಗಿಸುವುದು? | 1. ಸಣ್ಣ ವ್ಯಾಪಾರ ವಹಿವಾಟು ನಡೆಸುವವರಿಗೆ ಜಿ.ಎಸ್.ಟಿ ಸಂಬಂಧಿತ ಸಮಸ್ಯೆಗಳ ಪರಿಹಾರಕ್ಕೆ ಸಂಬಂಧಿಸಿದಂತೆ ಜಿ.ಎಸ್.ಟಿ ಸಹಾಯ ಪೀಠವನ್ನು (GST HELP DESK) ಎಲ್ಲಾ ವಿಭಾಗ ಮಟ್ಟದಲ್ಲಿ ತೆರೆಯಲಾಗಿರುತ್ತದೆ. ಜಿ.ಎಸ್.ಟಿ ವರ್ತಕರ ಯಾವುದೇ ಸಮಸ್ಯೆಯನ್ನು ಸಹಾಯ ಪೀಠದಲ್ಲಿ ಪರಿಹರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ ಹಾಗೂ ಅನೋಂದಾಯಿತ ಸಣ್ಣ ವ್ಯಾಪಾರಿಗಳು ಜಿ.ಎಸ್.ಟಿ ಕಾಯ್ದೆಯಡಿ ನೋಂದಣಿ ಪಡೆಯಲು ಅರಿವು ಮೂಡಿಸುವ ಜಿ.ಎಸ್.ಟಿ. ಜಾಗೃತಿ ಕಾರ್ಯಗಾರಗಳನ್ನು ಹಮ್ಮಿಕೊಳ್ಳಲಾಗಿದೆ.<br><br>2. ಸಣ್ಣ ವ್ಯಾಪಾರ ವಹಿವಾಟು ನಡೆಸುವವರಿಗೆ ಜಿ.ಎಸ್.ಟಿ. ಸಂಬಂಧಿತವಾಗಿ ಎದುರಾಗುತ್ತಿರುವ ಸಮಸ್ಯೆಗಳಿಗೆ ಸಂಬಂಧಪಟ್ಟ ಸರಕು ಮತ್ತು ಸೇವಾ ತೆರಿಗೆ ಕಛೇರಿಗಳ ಅಧಿಕಾರಿಗಳಿಗೆ ಮಾಹಿತಿ ನೀಡಲು ಸಹ ನಿರ್ದೇಶಿಸಲಾಗಿರುತ್ತದೆ.<br><br>3. ವಾಣಿಜ್ಯ ಮಹಾಮಂಡಳಿ ಸದಸ್ಯರು ಹಾಗೂ ತೆರಿಗೆ |

| | | |
|---|---|---|
| | | ಸಲಹೆಗಾರರ ಸಂಘದವರೊಂದಿಗೆ ಸಣ್ಣ ವ್ಯಾಪಾರ ವಹಿವಾಟು ನಡೆಸುವವರಿಗೆ ಜಿ.ಎಸ್.ಟಿ. ಸಂಬಂಧಿತ ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಜಿ.ಎಸ್.ಟಿ. ನೋಂದಣಿ ಪಡೆಯುವ ವಿಧಾನ ಇತ್ಯಾದಿ ಮೂಲಭೂತ ಮಾಹಿತಿಗೆ ಸಂಬಂಧಿಸಿದಂತೆ ಸಮಾಲೋಚನೆ ಸಭೆಗಳನ್ನು ನಡೆಸಲಾಗಿರುತ್ತದೆ |

**ಸಂಖ್ಯೆ: ಆಇ 60 ಸಿಎಸ್‌ಎಲ್ 2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ